ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ
ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ
**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004

---

# ಪ್ರಕಟಣೆಗಾಗಿ

# ಜೀವಿಯ ಚೈತನ್ಯವೇ ಪ್ರಕೃತಿ

– ಡಾ. ಆರೂಡ ಭಾರತಿ ಸ್ವಾಮಿಗಳು

ಜೀವಿಯ ಚೈತನ್ಯವೇ ಪ್ರಕೃತಿ ಎಂದು ಬೆಂಗಳೂರಿನ ರಾಮೋಹಳ್ಳಿ ಶ್ರೀ ಸಿದ್ಧಾರೂಢ ಮಿಷನ್ ಆಶ್ರಮದ ಡಾ. ಆರೂಡ ಭಾರತಿ ಸ್ವಾಮಿಗಳು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮೇ 21 ರಂದು ಅಧ್ಯಯನ ಶಿಬಿರದಲ್ಲಿ 'ಗುಣಬೇಧ ವಿಕಾರಂ' ಹಾಗೂ 'ವಿಶ್ವ ರಚನಾಭೇದಂ' ವಿಷಯಗಳ ಕುರಿತು ಉಪನ್ಯಾಸ ನೀಡುತ್ತಾ ತಿಳಿಸಿದರು. ಚೈತನ್ಯದ ಇಚ್ಛಾಶಕ್ತಿಯ ಪ್ರಚೋದನೆಯಿಂದ ಪಂಚಭೂತಗಳ ಸಹಕಾರದಿಂದ ಪ್ರಕೃತಿ ನಿರ್ಮಾಣವಾಗಿದೆ. ಗುಣಗಳನ್ನು ಗರ್ಭೀಕರಿಸಿಕೊಂಡು ಪ್ರಕೃತಿಯು ಮಹತ್ ಆಯಿತು. ಸತ್ವಗುಣ, ರಜೋಗುಣದ ಮಿಶ್ರಣದಿಂದ ಮನುಷ್ಯನ ಮನಸ್ಸು ನಿರ್ಮಾಣವಾಯಿತು. ರಜೋಗುಣದಿಂದ ಇಂದ್ರಿಯಗಳ ಮೂಲಕ ಮನಸ್ಸು ವಸ್ತುಗಳ ಕಡೆ ಸಂಚರಿಸುತ್ತದೆ. ಸತ್ವ ಗುಣದ ಸಹಾಯದಿಂದ ಅವುಗಳ ಬಗ್ಗೆ ತಿಳುವಳಿಕೆಯನ್ನು ಹೊಂದುತ್ತದೆ. ಶರೀರವು ಪಂಚಭೂತಗಳ ಮಿಶ್ರಣದಿಂದ ಉಂಟಾಗಿದೆ.

ಸಾಂಖ್ಯದರ್ಶನವು ಪ್ರಾಚೀನವಾದದ್ದು. ಸತ್ವ, ರಜ, ತಮ, ವಿಶ್ವವನ್ನು ವ್ಯಾಪಿಸಿರುವ ತ್ರಿಗುಣಗಳು ಪ್ರಕೃತಿ ತತ್ವದಿಂದ ಉದಯಿಸಿವೆ. ಈ ಗುಣಗಳು ಸಮಸ್ಥಿಯಲ್ಲಿದ್ದರೆ ಸೃಷ್ಠಿ ಇಲ್ಲ, ಸಮಸ್ಥಿತಿಗೆ ಬಂದರೆ ಪ್ರಳಯ. ಪುರುಷ ತತ್ವ ಕೇವಲ ಕ್ರೀಯಾಶೀಲವಲ್ಲ, ಪ್ರಕೃತಿ ತತ್ವವು ಪುರುಷ ಚೈತನ್ಯವನ್ನು ಬಳಸಿಕೊಂಡು ವೈವಿದ್ಯಮಯ ಸೃಷ್ಟಿಗೆ ಕಾರಣವಾಗಿದೆ. ನಿತ್ಯ, ನಿರ್ಗುಣ, ನಿರಾಕಾರ, ಅವ್ಯಕ್ತ, ಅವ್ಯಯ, ಅನಾಗ, ಅವಿಕಾರ, ಮುಕ್ತ ಇವು 'ನಾನು' ಎಂಬುದರ ಸಾಕ್ಷಿ ರೂಪ. ಅರಿಯುವ ಶಕ್ತಿ ಚೇತನ. ಪುರುಷ ಅಲ್ಲದ್ದು ಜಡ, ಪ್ರಕೃತಿ ಜಡವಾದರೂ ಪುರುಷನೊಡನೆ ಸೇರಿ ಕ್ರಿಯಾಶೀಲವಾಗುವುದು.

ಒಂದೊಂದು ಭೂತಗಳ ಪ್ರಧಾನ ಅಂಶ ಒಂದೊಂದು ಜ್ಞಾನೇಂದ್ರೀಯವಾಗಿವೆ. ಪ್ರತಿಯೊಂದರಲ್ಲೂ ವಿಶೇಷತೆಗಳಿವೆ. ಪ್ರಕೃತಿಯ ಚೈತನ್ಯ ಒಂದೇ ಆಗಿದ್ದರು ಜೀವರಾಶಿಯಲ್ಲಿ ಏಕತೆ ತೋರುತ್ತಿಲ್ಲ. ಭೂಮಿಯ ಸ್ವರೂಪ ವಿವಿಧ ರೀತಿ ಇದ್ದರು ಭೂಮಿ ಒಂದೇ ಎನ್ನುವುದನ್ನು ಅರಿಯಬೇಕು ಎಂದು ತಿಳಿಸಿದರು.

ಮೈಸೂರು ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ. ವಿ. ವಸಂತ್‌ಕುಮಾರ್‌ರವರು 'ಗುಣಭೇದ ವಿಕಾರಂ' ವಿಷಯ ಕುರಿತು ಉಪನ್ಯಾಸ ನೀಡುತ್ತಾ, ನಾವು ನಮ್ಮ ಶರೀರವನ್ನು ಅರ್ಥ ಮಾಡಿಕೊಳ್ಳುವುದರ ಮೂಲಕ ನಮ್ಮನ್ನು ಅರಿಯಬೇಕು. ಭೂಮಿಯ ಮೇಲೆ

ಜೀವಸಂಕುಲಗಳು ಬೀಜ, ಬೆವರು, ಮೊಟ್ಟೆ ಹಾಗೂ ಪಿಂಡದಿಂದ ಸೃಷ್ಟಿಯಾಗುತ್ತವೆ. ಮನುಷ್ಯನ ಶರೀರವು ಕಾರ್ಮಿಕಮಲ, ಮಾಯಾಮಲ ಹಾಗೂ ಅಣವಮಲಗಳಿಂದ ಸೃಷ್ಟಿಯಾಗಿದೆ. ಮಗುವು ತಾಯಿಯಿಂದ ಚರ್ಮ, ರಕ್ತ, ಸ್ನಾಯುವನ್ನು ಪಡೆದರೆ, ತಂದೆಯಿಂದ ಮೂಳೆ, ನರ, ಮಜ್ಜೆಯನ್ನು ಪಡೆಯುತ್ತದೆ. ಯೋಗಿಗಳಾಗಬಹುದಾದ ಎಲ್ಲಾ ಅಂಶಗಳು ನಮ್ಮ ದೇಹದಲ್ಲಿರುತ್ತವೆ ಹಾಗಾಗಿ ನಾವು ನಮ್ಮನ್ನರಿಯಬೇಕು. ತನ್ನನ್ನು ಅರಿತವನು ಸಮಸ್ತವನ್ನೇ ಅರಿಯುತ್ತಾನೆ. ಹೃದಯವು ಜೀವದ ನಿಲಯವಾಗಿದ್ದು ಅದು ಮನಸ್ಸನ್ನು ನಿಯಂತ್ರಿಸಬೇಕು ಎಂದು ತಿಳಿಸಿದರು.

ಶಿಬಿರದಲ್ಲಿ ಕರ್ನಾಟಕ, ಕೇರಳ ಹಾಗೂ ಮಹಾರಾಷ್ಟ್ರದಿಂದ ಆಗಮಿಸಿರುವ 165 ಕ್ಕೂ ಹೆಚ್ಚು ಶಿಬಿರಾರ್ಥಿಗಳು ಪಾಲ್ಗೊಂಡಿದ್ದಾರೆ. ಬೆಳಗ್ಗೆ ಶಿಬಿರಾರ್ಥಿಗಳು ಯೋಗ ಮತ್ತು ಧ್ಯಾನದ ಅಭ್ಯಾಸ ಮಾಡಿದರು. ಸಂಜೆ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



**ಶ್ರೀ ಸುತ್ತೂರು ಕ್ಷೇತ್ರದಲ್ಲಿ ನಡೆಯುತ್ತಿರುವ ಅಧ್ಯಯನ ಶಿಬಿರದಲ್ಲಿ ಶ್ರೀ ನಿಜಗುಣ ಶಿವಯೋಗಿಗಳ 'ಪರಮಾರ್ಥಗೀತೆ' ಕೃತಿಯ ಕುರಿತು ಬೆಂಗಳೂರಿನ ರಾಮೋಹಳ್ಳಿ ಶ್ರೀ ಸಿದ್ಧಾರೂಢ ಮಿಷನ್ ಆಶ್ರಮದ ಡಾ. ಆರೂಡ ಭಾರತಿ ಸ್ವಾಮಿಗಳು ಉಪನ್ಯಾಸ ನೀಡುತ್ತಿರುವುದು.**